ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
*ಚಪಲಕ್ಕೂ, ಅಭ್ಯಾಸಕ್ಕೂ ಏನು ವ್ಯತ್ಯಾಸ? ಹೆಂಡತಿ ನೋಡದಿದ್ದಾಗ ಅತ್ತಿತ್ತ*



ಕಣ್ಣುಹಾಯಿಸುವುದು ಚಪಲ; ಹೆಂಡತಿ ನೋಡಿದಾಗ ಸಭ್ಯನಂತಿರುವುದು ಅಭ್ಯಾಸ!

ವಿ. ಹೇಮಂತಕುಮಾರ್, ಬೆಂಗಳೂರು
*ಮನೆಗೆ ಬೆಂಕಿ ಬಿದ್ದರೆ ಫೈರ್ ಬ್ರಿಗೇಡ್ ಬರುತ್ತೆ. ಮನಕ್ಕೆ ಬೆಂಕಿ ಬಿದ್ದರೆ?*
ಉಪದೇಶಕರ ಬೋರ್ ಬ್ರಿಗೇಡ್ ಅಥವಾ ಸಮದುಃಖಿಗಳ ಬೀರ್ ಬ್ರಿಗೇಡ್.

ಪುಟ್ಟಂಜಮ್ಮ ಮು. ಬಾರ್ಕಿ, ಕಳ್ಳಿಹಾಳ
*ರಾಮ್‌ಜೀ, ನಿಮ್ಮ ಉತ್ತರಿಸುವ ಅಧಿಕಾರ (ಉತ್ತರಾಧಿಕಾರ) ನನಗೆ ಕೊಡುತ್ತೀರಾ?*
ಕ್ಯೂನಲ್ಲಿ ಬನ್ನಿ, ಕನಿಷ್ಠ ಐವತ್ತು ವರ್ಷ ಕಾಯಿರಿ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮಹಾಭಾರತ ನಡೆದದ್ದು ಹೆಣ್ಣಿನಿಂದ. ರಾಜಕೀಯ ನಡೆಯುವುದು?*
ವೃದ್ಧರಿಂದ.

ಟಿ.ಎಂ. ಮಾನಪ್ಪ, ಗೋಪಾಳ
*ಮದುವೆಗೆ ಮೊದಲು ಹುಡುಗರು ಮಸ್ತ್ಯರಿಯಂತಿದ್ದು ನಂತರ ಡಲ್ ಆಗಲು ಕಾರಣವೇನು?*



'ಪಾದರಸ' ಪಾದದಾಸ ಆಗುವುದರಿಂದ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಅನುಕರಣೆಗೂ, ನಿರಾಕರಣೆಗೂ ಇರುವ ವ್ಯತ್ಯಾಸವೇನು ಗುರು?*
ಕರಣೆ ಅದೇ ಆದರೂ ರಸಮಟ್ಟ ಬೇರೆ! ಒಂದು ಸಮರಸ ಮಟ್ಟ, ಇನ್ನೊಂದು ವಿರಸಮಟ್ಟ!

ಕೆ.ಜೆ. ರಾಮಪ್ರಸಾದ್, ಕಡೂರು
*ಈಗಿನ ಜನರು ಯಜ್ಞ ಯಾಗಾದಿಗಳನ್ನು ಮರೆತು ಮಾಟ, ಮಂತ್ರ, ವಶೀಕರಣವನ್ನೇ ನಂಬಲು ಕಾರಣ?*
ಚುನಾವಣೆ, ಗಾದಿ ನಿರತರಿಗೆ booth ಆರಾಧನೆಯೇ ಶ್ರೇಷ್ಠ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಣ್ಣ, ಮದುವೆ ಎಂಬುವುದು ಮೂರು ರಿಂಗ್‌ಗಳ ಸರ್ಕಸ್ ಅಂತಾರಲ್ಲ, ಇದರ ರಹಸ್ಯ?*
ಸರಿಯೇ; ಮೊದಲಿಗೆ ಪೇರಿಂಗ್, ಮದುವೆಯ ಮೊದಮೊದಲು ಕೇರಿಂಗ್, ನಂತರ ಸ್ಕೇರಿಂಗ್!

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಇರುವೆಗಳಂತೆ ದುಡಿಯುವ ಛಲವನ್ನು ಮನುಷ್ಯ ಹೊಂದಿದರೆ ಹೇಗೆ ಸಾರ್?*
ದುಡಿಯುವುದು ಅಂತಿರಲಿ, ಮೊದಲು ಅವುಗಳಂತೆ ಕ್ಯೂನಲ್ಲಿ ಬರುವುದನ್ನು ಕಲಿಯಲಿ ನೋಡೋಣ!

ಹೆಚ್.ಆರ್. ದೇಸಾಯಿ, ರಾಯಚೂರು
*ಮುಖ ಸುಂದರವಾಗಿ ಕಾಣಲು ನಾನಾ ಸೌಂದರ್ಯವರ್ಧಕಗಳಿವೆ. ಹೃದಯ ಸುಂದರವಾಗಿ ಕಾಣಲು?*
ಬುದ್ಧಿಮಾಲಿನ್ಯ ತಡೆಗಟ್ಟುವ ವಿಚಾರಗಳು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ನಮ್ಮ ಹುಟ್ಟಿನ ಜೊತೆಗೆ ಸಾವು ಬೆನ್ನತ್ತಿದ್ದರೂ ಅದರ ಬಗ್ಗೆ ಯಾರೂ ಚಿಂತಿಸುತ್ತಿಲ್ಲವಲ್ಲಾ, ಏಕೆ?*
ಚಿಂತಿಸಿರುವುದರಿಂದಲೇ ನರ್ಸಿಂಗ್ ಹೋಂ, ಡೆಡ್ ವ್ಯಾನ್, ಮಡಕೆಯವನು, ಶವ ಪೆಟ್ಟಿಗೆಯವರು, ಸ್ಮಶಾನ, ಇತ್ಯಾದಿಗಳು ಇರುವುದು.

ವೈ.ಜಿ. ನರಸಿಂಹನ್, ಶಿವಮೊಗ್ಗ
*ಈ ಬದುಕೊಂದು ಜೂಜು, ಚದುರಂಗದಾಟದ ಮೋಜು ಅಂತಾರಲ್ಲಾ...?*
ಒಂದೇ ವ್ಯತ್ಯಾಸ; ಚದುರಂಗದಲ್ಲಿ ಆನೆ, ಕುದುರೆ, ಒಂಟೆಗಳಿರುತ್ತವೆ; ಜೀವನದಲ್ಲಿ ಕತ್ತೆಗಳೇ ಹೆಚ್ಚು!

ಪಿ.ಎಂ. ಸುರೇಶ್, ಸುಳ್ಯ
*ಸನ್ನಿವೇಶ, ಸಂದರ್ಭ ಯಾವುದೇ ಇರಲಿ, ಸ್ತ್ರೀಯರು ಸದಾ ಸ್ತ್ರೀಯರ ಪರ ನಿಲ್ಲುವಂತೆ ಪುರುಷರೇಕೆ ಪುರುಷರ ಪರ ನಿಲ್ಲುವುದಿಲ್ಲ?*
ಹೆಂಡ ಅಥವಾ ಹೆಂಡತಿಯ ಅಧೀನದಲ್ಲಿ ಇರುವುದರಿಂದ!

## ಬಹುಮಾನಿತ ಪ್ರಶ್ನೆ

ಡಾ. ವಿನಯಾ ಶ್ರೀನಿವಾಸ್, ಶಿವಮೊಗ್ಗ
*ದೇವರ ಹೆಸರಿನಲ್ಲಿ ವಾರದ ಕೆಲ ದಿನಗಳಲ್ಲಷ್ಟೇ ಮಾಂಸಾಹಾರವನ್ನು ತ್ಯಜಿಸುತ್ತಾರಲ್ಲ... ಇದನ್ನು ದೇವರು ಮೆಚ್ಚುತ್ತಾನೆಯೇ?*
ಅದರಲ್ಲಿ ಮೆಚ್ಚುವ ಅಂಶವೇನಿದೆ? ಮರುದಿನ ಬಡ್ಡಿ ಸಮೇತ ತಿನ್ನುವರಲ್ಲ!

ಎನ್.ಎಸ್. ಆನಂದ, ಕತ್ತರಗುಪ್ಪ
*ಒಂದು ವೇಳೆ ಐದೂ ಬೆರಳುಗಳು ಒಂದೇ ಸಮ ಇದ್ದಿದ್ದರೆ ಏನಾಗುತ್ತಿತ್ತು?*
ಮ್ಯಾನುಫ್ಯಾಕ್ಚರಿಂಗ್ ಡಿಫೆಕ್ಟ್ ಎಂದು ಆಪರೇಷನ್ ಮಾಡಲಾಗುತ್ತಿತ್ತು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಭಯೋತ್ಪಾದಕರಿಗೆ ಯಮಧರ್ಮರಾಯ ನೌಕರಿ ನೀಡಿದ್ದಾನೆಯೇ?*
ಅಗತ್ಯವಿಲ್ಲ. ನಮ್ಮಲ್ಲಿರುವ ಹೈವೇಗಳು, ರೈಲ್ವೇಗಳು ಅವನ ಅಗತ್ಯತೆಗಳನ್ನು ಪೂರೈಸುವ ಸಾಮರ್ಥ್ಯ ಹೊಂದಿವೆ.

ಆರಿಫ್, ದಾವಣಗೆರೆ
*ಖಾಲಿ ಇರುವ ಡಬ್ಬಕ್ಕೆ ಒಂದು ಸಣ್ಣ ಕಲ್ಲು ಬಿದ್ದೊಡನೆ ಡಬ್ಬ ಸದ್ದು ಮಾಡುವುದೇಕೆ?*



ಅದು ಸದ್ದಲ್ಲ, ಕಲ್ಲು ಹೊಡೆದವರನ್ನು ಬೈಯಲು ಡಬ್ಬ ಬಳಸುವ ಭಾಷೆ!

ಬಿ.ಎನ್. ಸೊಲ್ಲಾಪುರ, ಬೀದರ
*ಖಾದಿ, ಕಾವಿ, ಖಾಕಿ, ಕರಿ ಕೋಟು, ಬಿಳಿ ಕೋಟುಗಳು ಅರ್ಥ ಕಳೆದುಕೊಳ್ಳುತ್ತಿರಲು ಏನು ಕಾರಣ?*
'ಅರ್ಥ' ಗಳಿಸಲು ಅನರ್ಥಕ್ಕೆ ತೊಡಗಿದ್ದರಿಂದ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಈಶ್ವರನಂತೆ ನಮಗೂ ಮೂರು ಕಣ್ಣಿದ್ದಿದ್ದರೆ?*
ನೇತ್ರ ವೈದ್ಯರು 33.33% ಹೆಚ್ಚು ಉದ್ಧಾರವಾಗುತ್ತಿದ್ದರು.

■ ರಾಮ್